ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ:ದ:ನ್ಯಾ:ದಂ.,ರವರು, ಕಡೂರು
C.C. No.2839/2024. PW 1.

ದಿನಾಂಕ:**06.04.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು:- ಆರೋಪಿ ಪರ ಶ್ರೀಮತಿ ಬಿ ಆರ್ ಆರ್ ವಕೀಲರಿಂದ:-

ನನ್ನ ಗಂಡನ ಹೆಸರು ಚಂದ್ರಪ್ಪ. ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ನಾನು ಟೈಲರಿಂಗ್ ಮತ್ತು ವ್ಯವಸಾಯ ಮಾಡುತ್ತೇನೆ. ಆರೋಪಿ ಹೇಗೆ ಪರಿಚಯ ಎಂದರೆ ನಮ್ಮ ಊರಿನಲ್ಲಿ ಆರೋಪಿ ಯ ಸಂಬಂಧಿಕರು ಇದ್ದು ನಮ್ಮ ಊರಿಗೆ ಬರುತ್ತಿದ್ದರು ಹಾಗಾಗಿ ಪರಿಚಯವಾಗಿರುತ್ತಾರೆ. ಆರೋಪಿಯು ನನಗೆ 5-6 ವರ್ಷಗಳಿಂದ ಪರಿಚಯ. ಆರೋಪಿಯು ಹಣ ಬೇಕು ನನ್ನ ಬಳಿ 2020 ರ ಜೂನ್‌ನಲ್ಲಿ ಕೇಳಿರಬಹುದು. ಆರೋಪಿ ಹಣ ಕೇಳಲು ಬಂದಿದ್ದಾಗ ನನ್ನ ಮನೆಯಲ್ಲಿ ನಾನು ಮತ್ತು ನನ್ನ ಸಂಬಂಧಿ ಮಂಜುಳಾ ಮತ್ತು ಕಲ್ಲೇಶ್ ರವರು ಇದ್ದರು. ಆ ಸಮಯದಲ್ಲಿ ನನ್ನ ಗಂಡ ಮನೆಯಲ್ಲಿ ಇರಲಿಲ್ಲ ಬೆಂಗಳೂರಿಗೆ ಹೋಗಿದ್ದರು.

ಆರೋಪಿಯು ನನ್ನ ಬಳಿ 2 ಲಕ್ಷ ಹಣ ಕೇಳಿದ್ದರು. ಆರೋಪಿಯು ಟ್ರ್ಯಾಕ್ಟರ್ ತೆಗೆದುಕೊಳ್ಳುವ ಸಲುವಾಗಿ ಹಣದ ಅವಶ್ಯಕತೆ ಇದೆ 2 ತಿಂಗಳಲ್ಲಿ ವಾಪಾಸು ಕೊಡುತ್ತೇನೆ ಎಂದು ಕೇಳಿರುತ್ತಾರೆ. ಆರೋಪಿ ಹಣ ಕೇಳಿದ 2 ವಾರಗಳ ನಂತರ ನಾನು ಆರೋಪಿಗೆ ಹಣ ನೀಡಿರುತ್ತೇನೆ. ನಾನು ಹಣ ಕೊಟ್ಟಾಗ ಏನು ದಾಖಲೆ ಬರೆದುಕೊಡಬೇಕು ಎಂಬ ಬಗ್ಗೆ ಯಾವುದೇ ಮಾತುಕತೆ ಆಗಿರಲಿಲ್ಲ. ನಾನು ಹಣ ಕೊಟ್ಟಿರುತ್ತೇನೆ ಎಂದು ಹೇಳಿದ ದಿನ ಯಾವುದೇ ದಾಖಲೆಯನ್ನು ಆರೋಪಿಯಿಂದ ಪಡೆದುಕೊಂಡಿಲ್ಲ ಸಾಕ್ಷಿಯು ಮುಂದುವರೆದು ಆರೋಪಿಗೆ ಹಣ ನೀಡಿದ ನಮ್ಮ ಸಂಬಂಧಿಕರು ಸಾಕ್ಷಿಯಾಗಿ ಇದ್ದರು. ನಾನು ಆರೋಪಿಗೆ ಕಳುಹಿಸಿದ ನೋಟೀಸು ಮತ್ತು ಈ ದೂರಿನಲ್ಲಿ ನನ್ನ ಸಂಬಂಧಿಕರು ಸಾಕ್ಷಿಯಾಗಿ ಇದ್ದರು ಎಂದು ಹೇಳಿರುವುದಿಲ್ಲ. ಅದೇ ರೀತಿ ಆರೋಪಿ 2020 ರ ಜೂನ್ ನಲ್ಲಿ ಹಣ ಕೇಳಲು ನನ್ನ ಮನೆಗೆ ಬಂದಿದ್ದರು ಎಂಬ ಬಗ್ಗೆ ನೋಟೀಸು ಮತ್ತು ಈ ದೂರಿನಲ್ಲಿ ನಮೂದು ಮಾಡಿರುತ್ತೀರಾ ಎಂದರೆ ನನಗೆ ಗೊತ್ತಾಗುತ್ತಿಲ್ಲ.

ನೋಟೀಸು ಮತ್ತು ದೂರಿನಲ್ಲಿ ಏನು ವಿಚಾರಗಳು ಇವೆ ಎಂದು ಗೊತ್ತಿರುತ್ತದೆಯೇ ಎಂದರೆ ಸಾಕ್ಷಿಯು ನಾನು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ಹಣ ನೀಡಿರುತ್ತೇನೆ ಎಂದು ಹೇಳಿದ ಎಷ್ಟು ದಿನಗಳ ನಂತರ ಆರೋಪಿ ನಿಮಗೆ ಚೆಕ್ ನೀಡಿರುತ್ತಾರೆ ಎಂದರೆ ಸಾಕ್ಷಿಯು 2024 ರ 6 ನೇ ತಿಂಗಳಿನಲ್ಲಿ ನೀಡಿರುತ್ತಾರೆ. 2020 ರಿಂದ 2024 ರ ವರೆಗೂ ಆರೋಪಿ ಹಣ ಕೊಟ್ಟಿಲ್ಲ ಮತ್ತು ಯಾವುದೇ ದಾಖಲೆಯನ್ನು ಕೊಟ್ಟಿಲ್ಲ ಕೊಡಿ ಎಂದು ಏನಾದರೂ ಕೇಳಿರುತ್ತೀರಾ ಎಂದರೆ ನಾನು ಕೇಳಿರುತ್ತೇನೆ ಆರೋಪಿ ಹಣ ವಾಪಾಸು ಕೊಡುತ್ತೇನೆ ಕೊಡುತ್ತೇನೆ ಎಂದು ದಾಖಲೆಗಳನ್ನು ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ.

2020 ರಿಂದ 2024 ರ ವರೆಗೂ ನಾನು ಅವರ ಬಳಿ ಹಣ ಕೊಡಿ ಎಂದು ಕೇಳುತ್ತಿದ್ದೆ ಅವರು ಕೊಡುತ್ತೇನ ಕೊಡುತ್ತೇನೆ ಎಂದು ಕೊಟ್ಟಿಲ್ಲ ಎಂಬ ವಿಚಾರವನ್ನು ನೋಟೀಸು ಮತ್ತು ಈ ದೂರಿನಲ್ಲಿ ಹೇಳಿರುತ್ತೇನೆ. ನಾನು ಈ ವಿಚಾರವನ್ನು ನೋಟೀಸು ಅಥವಾ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 2024 ರ ಯಾವ ದಿನಾಂಕದಂದು ಚೆಕ್ ನೀಡಿದರು ಎಂದರೆ ಸಾಕ್ಷಿಯು 2024 ರ 5 ನೇ ತಿಂಗಳಿನಲ್ಲಿ ಚೆಕ್ ನೀಡಿರುತ್ತಾರೆ ಆದರೆ ನಿಖರವಾಗಿ ದಿನಾಂಕ ನನಗೆ ಈಗ ನೆನಪಿಲ್ಲ. ಆರೋಪಿ ಚೆಕ್ ನೀಡಿರುತ್ತಾರೆ ಎಂದು ಹೇಳುವ ಚೆಕ್ ಅನ್ನು ಯಾವ ದಿನಾಂಕದಂದು ನಗಧೀಕರಣಕ್ಕೆ ಸಲ್ಲಿಸಿ ಎಂದು ತಿಳಿಸಿರುತ್ತಾರೆ ಎಂದರೆ ಚೆಕ್ ಅನ್ನು ನೀಡಿದ ದಿನವೇ ಹಾಜರುಪಡಿಸಿ ಎಂದು ತಿಳಿಸಿರುತ್ತಾರೆ, ಆದರೆ ನನಗೆ ಆ ದಿನ ಹಾಜರುಪಡಿಸಲು ಸಾದ್ಯವಾಗಿರಲಿಲ್ಲ ಆ ಕಾರಣ ದಿಃ24.06.2024 ರಂದು ಕಡೂರಿಗೆ ಬಂದು ಬ್ಯಾಂಕ್ ಗೆ ಹಾಜರುಪಡಿಸಿರುತ್ತೇನೆ. ಅಂದರೆ ಆರೋಪಿ ನನಗೆ ನೀಡಿರುತ್ತಾನೆ ಎಂದು ಹೇಳುವ ಚೆಕ್ 5 ನೇ ತಿಂಗಳಿನ ಚೆಕ್ ಎಂದರೆ ಸರಿ.

2024 ರ 5 ನೇ ತಿಂಗಳಲ್ಲಿ ನೀಡಿರುತ್ತಾರೆ ಎಂದು ಹೇಳಿದ ಚೆಕ್ ಗೆ ಆರೋಪಿ ದಿನಾಂಕ ಮತ್ತು ಇತರ ಬರವಣಿಗೆಗಳನ್ನು ಬರೆದು ಕೊಟ್ಟಿರುತ್ತಾರಯೇ ಎಂದರೆ ಸಾಕ್ಷಿಯು ದಿನಾಂಕ ನಮೂದು ಮಾಡಿರಲಿಲ್ಲ ಬೇರೆ ಎಲ್ಲಾ ವಿಚಾರಗಳನ್ನು ಬರೆದುಕೊಟ್ಟಿದ್ದರು. ಚೆಕ್ ನ ಮೇಲಿನ ದಿನಾಂಕವನ್ನು ನಾನೇ ನಮೂದು ಮಾಡಿರುತ್ತೇನೆ. ಆರೋಪಿಯು ನನಗೆ 5 ನೇ ತಿಂಗಳಿನಲ್ಲಿ ಚೆಕ್ ನೀಡಿದ್ದರು ಅದರಲ್ಲಿ ದಿನಾಂಕ ನಮೂದು ಮಾಡಿರಲಿಲ್ಲ, ನಾನೇ

ನಮೂದಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದು ನೋಟೀಸು ಮತ್ತು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ.

ನಾನು ಡಿಗ್ರಿ ಓದಿರುತ್ತೇನೆ. ನಿಪಿ 1 ರಲ್ಲಿ Jayamma, Two lakh Rupees ಎಂದು ಯಾರು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ದಿನಾಂಕವನ್ನು ಮಾತ್ರ ನಾನು ಬರೆದಿರುತ್ತೇನೆ.

2020 ರಲ್ಲಿ ಆರೋಪಿಗೆ ನೀಡಿರುತ್ತೇನೆ ಎಂದು ಹೇಳಿದ ಹಣ ನನ್ನ ಬಳಿಯೇ ನಗಧು ಇತ್ತು. ನನ್ನ ಬಳಿ ಇದ್ದ ನಗಧು ಹಣವನ್ನು ಆರೋಪಿಗೆ ನಗಧಾಗಿ ನೀಡಿರುತ್ತೇನೆ ಎಂದು ಹೇಳಿದ ವಿಚಾರವನ್ನು ದೂರಿನಲ್ಲಿ ನಮೂದು ಮಾಡಿರುತ್ತೇನೆ. ರೂ.20 ಸಾವಿರಕ್ಕಿಂತ ಹೆಚ್ಚಿನ ಮೊತ್ತವನ್ನು ಬ್ಯಾಂಕ್ ಮೂಲಕವಾಗಿಯೇ ವ್ಯವಹಾರ ಮಾಡಬೇಕು ಎಂದು ಗೊತ್ತಿರುತ್ತದೆಯೇ ಎಂದರೆ ಸರಿ, ಸಾಕ್ಷಿ ಮುಂದುವರೆದು ಸಂಬಂಧಿಕರ ಕಡೆಯಿಂದ ಪರಿಚಯಸ್ತರಾದ ಕಾರಣ ನಾನು ನಗಧು ಹಣವನ್ನು ನೀಡಿರುತ್ತೇನೆ.

ನಾನು ಹೇಳುವಂತಹಃ 2 ಲಕ್ಷ ಹಣವನ್ನು ನೀಡಲು ನನಗೆ ಆರ್ಥಿಕ ಸಾಮರ್ಥ ಇಲ್ಲ ಎಂದರೆ ಸರಿಯಲ್ಲ. ನಾನು ಎಸ್ ಬಿ ಐ ಕಡೂರು ಇಲ್ಲಿ ಬ್ಯಾಂಕ್ ಖಾತೆ ಹೊಂದಿದ್ದೇನೆ. ನನ್ನ ಗಂಡನು ಸಹಃ ಎಸ್ ಬಿ ಐ ಕಡೂರು ಬ್ಯಾಂಕಿನಲ್ಲಿ ಖಾತೆ ಹೊಂದಿದ್ದಾರೆ.

ಆರೋಪಿ ಜೊತೆ ಒಂದೇ ಬಾರಿ ಹಣದ ವ್ಯವಹಾರ ಮಾಡಿರುತ್ತೇನೆ. ನಾನು ಅಥವಾ ನನ್ನ ಗಂಡ ಯಾವುದೇ ಹಣ ವ್ಯವಹಾರ ಮಾಡಿದ್ದಲ್ಲಿ ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಮತ್ತು ನನ್ನ ಗಂಡನ ಬ್ಯಾಂಕ್ ಖಾತೆಯ ಸಂಖ್ಯೆಯನ್ನು ಹೇಳಲು ನನಗೆ ಈಗ ನೆನಪಿಲ್ಲ. ನನ್ನ ಗಂಡನ ಎಸ್ ಬಿ ಐ ಬ್ಯಾಂಕ್ ಖಾತೆ ಸಂಖ್ಯೆ 54034757175 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿಯು ನನ್ನ ಗಂಡ ಚಂದ್ರಪ್ಪ ರವರಿಂದ 2020 ರಲ್ಲಿ ರೂ.1 ಲಕ್ಷಹಣವನ್ನು ಸಾಲವಾಗಿ ಪಡೆದಿದ್ದರು ಆ ಸಂಬಂಧವಾಗಿ ನಿಪಿ1 ನ್ನು ನನ್ನ ಗಂಡನಿಗೆ ಆರೋಪಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ 1 ಲಕ್ಷ ಸಾಲದ ಹಣವನ್ನು ಆರೋಪಿಯು ದಿಃ09.07.2022 ರಂದು ಮತ್ತು 10.07.2022 ರಂದು ನನ್ನ ಗಂಡನಾದ ಚಂದ್ರಪ್ಪ ರವರ ಬ್ಯಾಂಕ್ ಖಾತೆಗೆ ಗೂಗಲ್ ಪೇ ಮೂಲಕ ಮರುಪಾವತಿ ಮಾಡಿದ್ದಾರೆ

ಎಂದರೆ ನನಗೆ ಗೊತ್ತಿಲ್ಲ. ಹಾಗಾಗಿ ಆರೋಪಿಯು ಹಣ ಮರುಪಾವತಿ ಮಾಡಿದ್ದರು ಸಹಃ ನನ್ನ ಗಂಡನು ಆರೋಪಿ ಗೆ ಚೆಕ್ ವಾಪಾಸು ಕೊಡದೇ ನನ್ನ ಮೂಲಕ ಈ ಸುಳ್ಳು ಚೆಕ್ ಕೇಸ್ ಅನ್ನು ದಾಖಲು ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ, ಅದೇ ರೀತಿ ನಿಪಿ 1 ನ್ನು ಆರೋಪಿಯು ನನಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.